ಅ) ಕೃಷ್ಣಾನದಿಯ ನೀರಿನ ಸಂಪೂರ್ಣ ಬಳಕೆಗಾಗಿ ಕ್ರಿ. ಶ. ೨೦೦೦ ಕ್ಕೂ ಮೊದಲು ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಆ) ರಾಜ್ಯದ ನೀರಾವರಿ ಯೋಜನೆಗಳಿಗೆ ಪ್ರತಿ ವರ್ಷ ೩೦೦ ಕೋಟಿ ರೂ. ಗಳನ್ನು ಒದಗಿಸುವ ಬಗ್ಗೆ ಸರ್ಕಾರದ ನೀತಿಯೇನು?

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಯೋಜನೆಯನ್ನು ಶೀಘ್ರವಾಗಿ ಪೂರ್ಣ ಗೊಳಿಸಲು ವಿಶ್ವಬ್ಯಾಂಕ್ ನೆರವನ್ನು ಕೋರಲಾಗಿದೆ. ಕೃಷ್ಣಾ ಮೆಲ್ದಂಡೆ ಯೋಜನೆಯ ಮೊದಲ ಹಂತವನ್ನು ಕ್ರಿ. ಶ. ೧೯೯೫-೯೬ರ ವೇಳೆಗೂ ಯೋಜನೆಯ ೨ನೇ ಹಂತವನ್ನು ಕ್ರಿ. ಶ. ೨೦೦೦ರ ವೇಳೆಗೂ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಆ) ಪರಿಶೀಲನೆಯಲ್ಲಿದೆ.

ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರದ ಅನುಮೋದನೆ

೧೪೯೪ (೨೮೩೨) ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಹಿಂದಿನ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರಕ್ಕೆ ಅನುಮೋದನೆಗಾಗಿ ಕಳಿಸಲಾದ ನೀರಾವರಿ ಯೋಜನಾ ಪ್ರಸ್ತಾಪನೆಗಳು ಹಾಗೂ ಅವುಗಳ ಅಂದಾಜು ವೆಚ್ಚ ಎಷ್ಟು ?

ಆ) ಕೇಂದ್ರದಿಂದ ಈ ಅವಧಿಯಲ್ಲಿ ಈವರೆಗೆ ಅನುಮೋದಿತವಾದ ಯೋಜನೆಗಳು ಹಾಗೂ ಅವುಗಳ ಅಂದಾಜು ವೆಚ್ಚವೆಷ್ಟು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕೃಷ್ಣಾ ಜಲಾನಯನ:

೧) ಕೃಷ್ಣಾ ಮೇಲ್ದಂಡೆ ಯೋಜನೆ (ಮೊದಲ ಹಂತ) (ಪರಿಷ್ಕೃತ ಅಂದಾಜು)	೧೦೭೧.೧೦ ಕೋಟಿ ರೂ.ಗಳು
೨) ಕಾರಂಜಾ (ಪರಿಷ್ಕೃತ ಅಂದಾಜು)	೯೮.೦೦ ಕೋಟಿ ರೂ. ಗಳು
೩) ಹಿಪ್ಪರಗಿ ಬ್ಯಾರೇಜ್	೧೮೭.೦೦ ಕೋಟಿ ರೂ. ಗಳು
೪) ರಾಂತಾಳೆ ಯಾತ ನೀರಾವರಿ	೪೫.೨೫ ಕೋಟಿ ರೂ. ಗಳು
೫) ಭೀಮಾ ಯಾತ ನೀರಾವರಿ	೪೫.೭೫ ಕೋಟಿ ರೂ. ಗಳು
೬) ಭೀಮಾ ಪ್ಲೋ ನೀರಾವರಿ ಯೋಜನೆ	೭೮.೪೮ ಕೋಟಿ ರೂ. ಗಳು

ಕಾವೇರಿ ಜಲಾನಯನ :

೧) ಅರ್ಕಾವತಿ ನೀರಾವರಿ ಯೋಜನೆ	೨೨.೨೫ ಕೋಟಿ ರೂ. ಗಳು
೨) ಯಗಚಿ ನೀರಾವರಿ ಯೋಜನೆ	೩೫.೩೮ ಕೋಟಿ ರೂ. ಗಳು

ಆ) ಯಾವ ಯೋಜನೆಗಳೂ ಇದುವರೆವಿಗೂ ಅನುಮೋದಿಸಲ್ಪಟ್ಟಿಲ್ಲ.

ಕಾವೇರಿ ಜಲ ವಿವಾದದ ಬಗ್ಗೆ ಅಧಿಕಾರಿಗಳ ಸಭೆ

೧೪೯೫ (೨೮೩೩) ಶ್ರೀ ಹೆಚ್. ಪಾಟೀಲ್ (ಗದಗ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯೆಯಿಟ್ಟು ಉತ್ತರಿಸುವರೇ:—

ಕಾವೇರಿ ಜಲ ವಿವಾದದ ಬಗ್ಗೆ ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ನಮ್ಮ ರಾಜ್ಯದ ಮತ್ತು ತಮಿಳುನಾಡಿನ ಅಧಿಕಾರಿಗಳ ಸಭೆಯ ಫಲಿತಾಂಶವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ತಮಿಳುನಾಡಿನ ರಾಜ್ಯಪಾಲರು ಮತ್ತು ಕರ್ನಾಟಕ ಮುಖ್ಯಮಂತ್ರಿಗಳ ನಡುವೆ ಸೆಪ್ಟೆಂಬರ್‌ನಲ್ಲಿ ನಡೆಯಬೇಕಾದ ಸಭೆಯಲ್ಲಿ ಚರ್ಚಿಸಬೇಕಾದ ವಿಷಯದಲ್ಲಿನ ವಿವರಗಳು, ಹಾಗೂ ರೂಪು ರೇಷೆಗಳನ್ನು ಗುರುತಿಸಲು ಎರಡು ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಅಧಿಕಾರಿಗಳ ಸಭೆ ನಡೆಯಿತು.

ತೆಲುಗು ಗಂಗಾ ಯೋಜನೆ

೧೪೯೬ (೩೦೬೩) ಶ್ರೀ ಮಲ್ಲಿಕಾರ್ಜುನಖರ್ಗೆ (ಗುರುಮಿಠ್‌ಕಲ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ತೆಲುಗು ಗಂಗಾ ಯೋಜನೆ ಬಗ್ಗೆ ಮಾತುಕತೆಗಳನ್ನು ಮುಂದೂಡಬೇಕೆಂದು ಕೇಂದ್ರ ಸರ್ಕಾರವನ್ನು ಸರ್ಕಾರವು ಕೋರಿರುವುದು ನಿಜವೇ?

ಆ) ರಾಜ್ಯದ ಕಾವೇರಿ ಮತ್ತು ಕೃಷ್ಣಾ ಜಲಾನಯನ ಪ್ರದೇಶಗಳ ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸಲು ಎಷ್ಟು ಅನುದಾನ ಒದಗಿಸಲಾಗಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೬-೯-೧೯೮೮ ರಂದು ಕರೆದಿದ್ದ ಸಭೆಯು ಬದಲು ೨೦-೯-೧೯೮೮ ರ ನಂತರ ಸಭೆ ಕರೆಯಲು ಸರ್ಕಾರವು ಕೇಂದ್ರವನ್ನು ಕೋರಿದೆ.

ಆ) ೧೯೮೮-೮೯ ರ ಸಾಲಿನಲ್ಲಿ ೨೪೭.೦೭ ಕೋಟಿ ರೂ. ಗಳನ್ನು ಒದಗಿಸಲಾಗಿದೆ. ಈ ವರ್ಷ ಮತ್ತು ಮುಂದಿನ ವರ್ಷಗಳಲ್ಲಿ ಈ ಅನುದಾನವನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ.

ಬಚಾವತ್ ನ್ಯಾಯಮಂಡಳಿಯ ತೀರ್ಪಿನಂತೆ ಕೃಷ್ಣಾ ನದಿ ನೀರಿನ ಬಳಸುವಿಕೆ

೧೪೯೭ (೨೫೩೧) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬಚಾವತ್ ನ್ಯಾಯ ಮಂಡಳಿಯ ತೀರ್ಪಿನಂತೆ ಕೃಷ್ಣಾನದಿ ಮತ್ತು ಅದರ ಉಪನದಿಗಳಿಂದ ರಾಜ್ಯಕ್ಕೆ ಲಭಿಸಿರುವ ನೀರಿನಪಾಲು ಎಷ್ಟು ?

ಆ) ಈ ರೀತಿ ದೊರೆತಿರುವ ನೀರಿನ ಪಾಲನ್ನು ಉಪಯೋಗಿಸಿಕೊಳ್ಳಲು ರಾಜ್ಯವು ತೆಗೆದುಕೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೭೫೭ ಟಿಎಂಸಿಗಳು. (ಕೃಷ್ಣಾನದಿಯಿಂದ ೭೫೭ ಟಿಎಂಸಿ ಮತ್ತು ಗೋದಾವರಿ ತಿರುಗಣೆಯಿಂದ ೨೫ ಟಿಎಂಸಿ)

ಆ) ಕೃಷ್ಣಾನದಿಯ ೭೫೭ ಟಿಎಂಸಿ ನೀರನ್ನು ಬಳಸಿಕೊಳ್ಳಲು ಒಂದು ಮಾಸ್ಟರ್ ಪ್ಲಾನನ್ನು ತಯಾರಿಸಲಾಗಿದೆ.

ಸರ್ಕಾರಿ ಅಧಿಕ ಉತ್ಪಾದನೆ ತಳಿಗಳ ಬೀಜ ಒದಗಿಸುವುದು

೧೪೯೮ (೨೮೨೮) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಕೃಷಿ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ರಾಜ್ಯದಲ್ಲಿ ನೀರಾವರಿಯಲ್ಲಿ ಮತ್ತು ಇತರೆ ಮೂಲಗಳಿಂದ ಕೃಷಿ ಸಾಗುವಳಿ ಎಷ್ಟು ?

ಆ) ಕರ್ನಾಟಕ ರಾಜ್ಯಕ್ಕೆ ಕೃಷಿ ಸಾಗುವಳಿ ಮಾಡಲು ಬೇಕಾಗುವ ಬೀಜಗಳ ಬೇಡಿಕೆಷ್ಟು ?